ಓ ಎಸ್ಃ 229/2016

ಪಿ ಡಬ್ಲ್ಯೂ ಃ 1

ದಿನಾಂಕಃ 12.08.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ 2 ರಿಂದ 6 , 8 ಮತ್ತು 9 ರವರ ಪರ ಶ್ರೀ ಆರ್ ಕೆ ವಕೀಲರಿಂದಃ**

ನಾನು ದಿನಾಂಕ ಃ 06.05.1955 ರಲ್ಲಿ ಹುಟ್ಟಿರುತ್ತೇನೆ ಎಂದರೆ ಸಾಕ್ಷಿ ನಾನು 1958 ರಲ್ಲಿ ಹುಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ನಾನು 1958 ರಲ್ಲಿ ಹುಟ್ಟಿರುತ್ತೇನೆ ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ನೀಡಿರುವುದಿಲ್ಲ. ನಾನು ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆ, ವೋಟಗಾನಹಳ್ಳಿಯಲ್ಲಿ ಓದಿರುತ್ತೇನೆ ಎಂದರೆ ಸರಿ. ನನ್ನ ಶಾಲೆಯ ದಾಖಲಾತಿಗಳ ಪ್ರಕಾರ ನಾನು 1955 ರಲ್ಲಿ ಹುಟ್ಟಿರುತ್ತೇನೆ ಎಂದರೆ ಸಾಕ್ಷಿ ಆಧಾರ್ ಕಾರ್ಡಿನಲ್ಲಿ 1958 ಎಂದು ತೋರಿಸಲಾಗಿರುತ್ತದೆ ಎಂದು ನುಡಿಯುತ್ತಾರೆ.

ನಾನು 10 ನೇ ತರಗತಿಯವರೆಗೆ ಓದಿರುತ್ತೇನೆ. ನಾನು ನನ್ನ ಶಾಲೆಯ ದಾಖಲಾತಿಗಳನ್ನು ಕೊಡಲು ಆಗುತ್ತದೆಯೋ ಎಂದರೆ ತಂದು ಕೊಡುತ್ತೇನೆ. ನನ್ನ ಎಲ್ಲ ಶಾಲಾ ದಾಖಲಾತಿಗಳಲ್ಲಿ ನನ್ನ ಜನ್ಮ ದಿನಾಂಕ ಃ 06.05.1955 ಎಂದು ಇರುತ್ತದೆ ಎಂದರೆ 1958 ಎಂದು ಹೇಳುತ್ತಾರೆ. ನಾನು ಕಾನೂನಿನ ಪ್ರಕಾರ 1955 ರಲ್ಲಿ ಹುಟ್ಟಿದ್ದು ಮತ್ತು ನನಗೆ ತೊಂದರೆಯಾಗುತ್ತದೆ ಎಂದು 1958 ರಲ್ಲಿ ಹುಟ್ಟಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಶಾಂತಕುಮಾರಿ ರವರು ನನಗಿಂತ ದೊಡ್ಡವರು ಎಂದರೆ ಸರಿ ಶಾಂತಕುಮಾರಿ ಯವರು ದಿನಾಂಕಃ 4.06.1949 ರಲ್ಲಿ ಹುಟ್ಟಿರುತ್ತಾರೆ ಎಂದರೆ ಗೊತ್ತಿಲ್ಲ. ಅವರು 4 ನೆ ತರಗತಿಯವರೆಗೂ ಓದಿರುತ್ತಾರೆ. ಸಾವಿತ್ರಮ್ಮ ನವರು 3.03.1944 ರಲ್ಲಿ ಹುಟ್ಟಿರುತ್ತಾರೆ ಎಂದರೆ ಗೊತ್ತಿಲ್ಲ. ಆಲಮೇಲಮ್ಮ ನವರು ನಮ್ಮೆಲ್ಲರಿಗಿಂತ ದೊಡ್ಡವರಾಗಿದ್ದು ಅವರು 30.04.1940 ರಲ್ಲಿ ಹುಟ್ಟಿರುತ್ತಾರೆ ಎಂದರೆ ಸರಿ. ಅವರು 2/3 ನೆ ತರಗತಿಯವರೆಗೂ ಓದಿರಬಹುದು. ನಾವು ಎಲ್ಲ ಹೆಣ್ಣು ಮಕ್ಕಳು ವೋಟಗಾನಹಳ್ಳಿಯ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲೇ ಓದಿರುತ್ತೇವೆ. ಎಲ್ಲ ಹೆಣ್ಣು ಮಕ್ಕಳ ಮತ್ತು ಗಂಡು ಮಕ್ಕಳ ಮದುವೆಯು ನನ್ನ ತಂದೆ ತಾಯಿ ಬದುಕಿದ್ದಾಗ ಆಗಿತ್ತು ಎಂದರೆ ಸರಿ . ನನ್ನ ತಂದೆ ಮೊದಲು ದಿನಾಂಕ ಃ 11.06.2007 ರಲ್ಲಿ ತೀರಿಕೊಂಡಿರುತ್ತಾರೆ . ನನ್ನ ತಾಯಿ 11.08.2009 ರಲ್ಲಿ ತೀರಿಕೊಂಡಿರುತ್ತಾರೆ. ನನ್ನ ತಂದೆ ತಾಯಿ ಬದುಕಿದ್ದ ಕಾಲದಲ್ಲಿ ಎಲ್ಲ ಗಂಡು ಮಕ್ಕಳು ಬೇರೆ ಬೇರೆ ವಾಸ ಮಾಡುತ್ತಿದ್ದರು ಎಂದರೆ ಅವರಿಗೆ ಇಷ್ಟ ಇರಲಿಲ್ಲ, ಅವರು ಬೇರೆ ಬೇರೆ ವಾಸ ಮಾಡುತ್ತಿದ್ದರು ಎಂದು ನುಡಿಯುತ್ತಾರೆ

. ನನ್ನ ತಂದೆ ಪತ್ರ ಬರಹಗಾರರು ಆಗಿದ್ದರು ಎಂದರೆ ಸರಿ . ನನ್ನ ತಂದೆ ನಮ್ಮ ಸಮಾಜದಲ್ಲಿ ಮುಖ್ಯಸ್ಥರು ಮತ್ತು ಗೌರವಸ್ಥರು ಎಂದರೆ ಸರಿ .ನನ್ನ ತಂದೆಯ ಸಹಿಯನ್ನು ನನಗೆ ತೋರಿಸಿದರೆ ನಾನು ಅದನ್ನು ಗುರುತಿಸುತ್ತೇನೆ .ನನ್ನ ಅಣ್ಣ ತಮ್ಮಂದಿರ ಸಹಿಗಳನ್ನು ನನಗೆ ಗುರುತಿಸಲು ಆಗುವುದಿಲ್ಲ.

ನಾನು ದಿನಾಂಕ ಃ 15.4.973 ರ ಪಂಚಾಯಿತಿ ಪಾರಿಕತ್ ನ್ನು ನೋಡಿರುವುದಿಲ್ಲ. ನಾನು ಈ ದಿನ ನನ್ನ ಕನ್ನಡಕ ತರದೇ ಇರುವ ಕಾರಣ ನನಗೆ ಸದರಿ ಪಂಚಾಯಿತ್ ಪಾರಿಕತ್ ನ್ನು ತೋರಿಸಿದರೆ ಓದಲು ಆಗುವುದಿಲ್ಲ. ನಾನು ಕನ್ನಡಕ ತಂದು ಮುಂದಿನ ದಿನಾಂಕ ಸದರಿ ಪಾರಿಕತ್ ಬಗ್ಗೆ ಹೇಳುತ್ತೇನೆ. ಸಾಕ್ಷಿಯು ಸ್ವ ಇಚ್ಛೆಯಿಂದ 1973 ರಿಂದ ನನಗೆ ಏನು ಸರಿಯಾಗಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. 1973 ರಿಂದ ಎಲ್ಲ ಗಂಡು ಮಕ್ಕಳು ವಿಭಾಗ ಮಾಡಿಕೊಂಡು ಬೇರೆ ಬೇರೆ ವಾಸ ಮಾಡುತ್ತಿದ್ದಾರೆ ಎಂದರೆ ಸುಳ್ಳು. ನನಗೆ ಸ.ನಂ. 108 ರಲ್ಲಿ 1 ಎಕರೆ ಜಮೀನು ಇರುವ ಬಗ್ಗೆ ಗೊತ್ತಿಲ್ಲ. ಸ.ನಂ. 108 ರಲ್ಲಿ ಇರುವ ಜಮೀನನ್ನು ಎಲ್ಲ ಹೆಣ್ಣು ಮಕ್ಕಳಿಗೆ ನೀಡಲಾಗಿರುತ್ತದೆ ಎಂದರೆ ಗೊತ್ತಿಲ್ಲ. ನನ್ನ ತಂದೆ ಯವರು ಅವರಿಗೆ ಬಂದ ಆಸ್ತಿಯ ಬಗ್ಗೆ 1991 ರಲ್ಲಿ ಒಂದು ವಿಲ್ ನ್ನು ಬರೆದಿರುತ್ತಾರೆ ಎಂದರೆ ಗೊತ್ತಿಲ್ಲ . 1991 ರಲ್ಲಿ ಬರೆದಿರುವ ವಿಲ್ ನಲ್ಲಿ ನನ್ನ ತಂದೆಯವರು 1973 ರಲ್ಲಿ ಭಾಗ ಆಗಿರುವ ವಿಚಾರವನ್ನು ಬರೆದಿರುತ್ತಾರೆ ಎಂದರೆ ಗೊತ್ತಿಲ್ಲ. ಸದರಿ ವಿಲ್ ನಲ್ಲಿ ನನ್ನ ತಂದೆ ಹೆಣ್ಣು ಮಕ್ಕಳಿಗೆ 2006 ರಲ್ಲಿ ಭಾಗ ವಿಲ್ ನಂತೆ ನೀಡಲಾಗಿರುತ್ತದೆ ಎಂದರೆ ಗೊತ್ತಿಲ್ಲ. ಸ.ನಂ. 10 ರಲ್ಲಿ 30 ಗುಂಟೆ ಜಮೀನಿರುತ್ತದೆ ಎಂದರೆ ಗೊತ್ತಿಲ್ಲ .ಸದರಿ ಕೆಮ್ಮನಹಳ್ಳಿಯ ಜಮೀನು ಸ.ನಂ. 108 ಎಂದು ತಪ್ಪಾಗಿ ಬರೆಯಲಾಗಿದ್ದು ,ಅದನ್ನು ಸ.ನಂ. 96 ಎಂದು ಸರಿಪಡಿಸಲಾಗಿರುತ್ತದೆ ಎಂದರೆ ಸಾಕ್ಷಿ ನಮ್ಮ ತಂದೆ ಆ ರೀತಿ ಮಾಡಿರಬಹುದು ನನಗೆ ಅದರ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ .ಸ.ನಂ. 10 ರಿಲ್ಲಿ 30 ಗುಂಟೆ ಜಮೀನು ಇರುವುದನ್ನು ನೀವು ನೋಡಿರುತ್ತೀರಾ ಎಂದರೆ ನನಗೆ ಅದರ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ .

**ಮುಂದುವರೆದ ವಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ**